ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 28-11-1969.

(ओम शान्ति,  बापदादा. अव्यक्त मुरली 28-11-1969)

***ಲೌಕಿಕವನ್ನು ಅಲೌಕಿಕದಲ್ಲಿ ಪರಿವರ್ತನೆ ಮಾಡುವ ಯುಕ್ತಿಗಳು***

(लौकिक को अलौकिक में परिवर्तन करने की युक्तियाँ)

ಇಂದು ಭಟ್ಟಿಯ ಯಾವ ದಿನವಾಗಿದೆ? ಸಂಪೂರ್ಣ ಸಮರ್ಪಣೆಯಾಗುವ ದಿನ ಹೀಗೆ ತಿಳಿದು ಬಾಪ್ ದಾದಾ ಅವರನ್ನು ಕರೆಸಲಾಗಿದೆ. ಸಂಪೂರ್ಣ ಸಮರ್ಪಣೆಯಾಗಲು ಎಲ್ಲರೂ ಸಿದ್ಧವಾಗಿರುವಿರಾ ಅಥವಾ ಸಂಪೂರ್ಣರಾಗಿರುವಿರಾ ಇಂದು ಯಾರು ಸಂಪೂರ್ಣರಾಗಿದ್ದಾರೋ ಅವರ ಸಮಾರಂಭವಾಗಿದೆ. ಈ ಎಲ್ಲರೂ ಸಂಪೂರ್ಣ ಸಮರ್ಪಣೆಯಾಗಿದ್ದಾರೆ. ಸಂಪೂರ್ಣ ಸಮರ್ಪಣೆಯಾದವರ ದೃಷ್ಟಿ ಹೇಗಿರುತ್ತದೆ? (ಶುದ್ಧ ದೃಷ್ಟಿ, ವೃತ್ತಿ) ಆದರೆ ಯಾವ ಯುಕ್ತಿಯಿಂದ ಆ ವೃತ್ತಿ-ದೃಷ್ಟಿ ಶುದ್ಧವಾಗುವುದು? ಒಂದೇ ಶಬ್ದದಲ್ಲಿ ಹೇಳುವುದಾದರೆ ದೃಷ್ಟಿ ಮತ್ತು ವೃತ್ತಿಯಲ್ಲಿ ಆತ್ಮೀಯತೆ ಬರುವುದು. ಅರ್ಥಾತ್ ಆತ್ಮಿಕ ದೃಷ್ಟಿ-ವೃತ್ತಿ ಆಗುತ್ತದೆ. ದೇಹವನ್ನು ನೋಡುವುದಿಲ್ಲವಾದರೆ ಶುದ್ಧ ಪವಿತ್ರ ದೃಷ್ಟಿಯಾಗುತ್ತದೆ. ಜಡ ವಸ್ತುವನ್ನು ಕಣ್ಣುಗಳಿಂದ ನೋಡದಿದ್ದರೆ ಆ ಕಡೆಗೆ ವೃತ್ತಿಯೂ ಹೋಗುವುದಿಲ್ಲ. ದೃಷ್ಟಿ ಹೋಗದಿದ್ದರೆ ವೃತ್ತಿಯೂ ಹೋಗುವುದಿಲ್ಲ. ದೃಷ್ಟಿಯು ನೋಡಿದಾಗ ವೃತ್ತಿಯೂ ಹೋಗುವುದು. ಆತ್ಮಿಕ ದೃಷ್ಟಿ ಅರ್ಥಾತ್ ತಮ್ಮನ್ನು ಮತ್ತು ಬೇರೆಯವರನ್ನು ಆತ್ಮ ಎಂದು ನೋಡಬೇಕು. ದೇಹದ ಕಡೆಗೆ ನೋಡುತ್ತಿದ್ದರೂ ನೋಡದಂತಿರಬೇಕು. ಈ ರೀತಿಯ ಅಭ್ಯಾಸವಾಗಬೇಕು. ಹೇಗೆಂದರೆ ಯಾರಾದರೂ ಬಹಳ ಆಳವಾದ ವಿಚಾರದಲ್ಲಿದ್ದಾಗ ಏನಾದರೂ ಮಾಡುತ್ತಾರೆ, ಓಡಾಡುತ್ತಾರೆ ಆಹಾರ-ಪಾನೀಯಗಳನ್ನು ಸೇವಿಸುತ್ತಾರೆ. ಆದರೆ ನಾನು ಎಲ್ಲಿಯವರೆಗೆ ಬಂದಿದ್ದೇನೆ, ಏನು ತಿಂದಿದ್ದೇನೆ ಎಂದು ಅವರಿಗೆ ಗೊತ್ತೇ ಆಗುವುದಿಲ್ಲ. ಅದೇ ರೀತಿ ದೇಹವನ್ನು ನೋಡುತ್ತಿದ್ದರೂ ನೋಡುವುದಿಲ್ಲ ಮತ್ತು ಆತ್ಮನನ್ನು ನೋಡುವುದರಲ್ಲಿಯೇ ವ್ಯಸ್ತರಾಗಿರುತ್ತಾರೆ ಆಗ ಈ ಸ್ಥಿತಿಯಾಗುವುದು. ಆಗ ಯಾರೇ ತಮ್ಮನ್ನು ಅವಳು ಹೇಗಿದ್ದಳು ಎಂದು ಕೇಳಿದರೆ ತಮಗೆ ಗೊತ್ತೇ ಆಗುವುದಿಲ್ಲ. ಆದರೆ ಯಾವಾಗ ದೈಹಿಕ ವಸ್ತುಗಳನ್ನು ನೋಡುತ್ತಿದ್ದರೂ ಆ ದೈಹಿಕ, ಲೌಕಿಕ ವಸ್ತುವನ್ನು ಅಲೌಕಿಕ ರೂಪದಲ್ಲಿ ಪರಿವರ್ತನೆ ಮಾಡಿದಾಗ ಈ ಸ್ಥಿತಿಯಾಗುವುದು. ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಲು ಯಾವ ಲೌಕಿಕ ವಸ್ತುಗಳನ್ನು ನೋಡುತ್ತೀರೋ ಅಥವಾ ಲೌಕಿಕ ಸಂಬಂಧಿಗಳನ್ನು ನೋಡುತ್ತೀರೋ ಅವೆಲ್ಲವನ್ನು ಅಲೌಕಿಕಕ್ಕೆ ಪರಿವರ್ತನೆ ಮಾಡಬೇಕಾಗುತ್ತದೆ. ಲೌಕಿಕದಲ್ಲಿ ಅಲೌಕಿಕದ ಸ್ಮೃತಿ ಇರಲಿ, *ಲೌಕಿಕ ಸಂಬಂಧಿಗಳನ್ನು ನೋಡುವಿರಿ ಆದರೆ ಈಗ ಇವರು ನಮ್ಮ ಬ್ರಹ್ಮಾ ತಂದೆಯ ಕೊನೆಯ ಪೀಳಿಗೆಯವರಾಗಿದ್ದಾರೆ ಎಂದು ತಿಳಿದುಕೊಳ್ಳಿ, ಬ್ರಹ್ಮನ ವಂಶವಂತೂ ಇದೆಯಲ್ಲವೇ ಏಕೆಂದರೆ ಬ್ರಹ್ಮ ರಚಯಿತನಾಗಿರುವುದರಿಂದ ಭಕ್ತರು, ಜ್ಞಾನಿ ಮತ್ತು ಅಜ್ಞಾನಿಗಳು ಅವರ ವಂಶಾವಳಿಗಳು, ಆದ್ದರಿಂದ ಲೌಕಿಕ ಸಂಬಂಧಿಕರು ಬ್ರಹ್ಮನ ವಂಶದವರು ಆದರೆ ಅವರು ಸಮೀಪದ ಸಂಬಂಧದವರು, ಇವರು ದೂರದವರು. ಈ ರೀತಿ ಯಾವುದೇ ಲೌಕಿಕ ವಸ್ತುವನ್ನು ನೋಡಿದಾಗ, ಆಫೀಸ್ನಲ್ಲಿ ಕೆಲಸ ಮಾಡುವಾಗ, ಉದ್ಯೋಗ ಮಾಡುವಾಗ, ಊಟ ಮಾಡುವಾಗ, ನೋಡುವಾಗ, ಮಾತನಾಡುವಾಗ ಒಂದೊಂದೂ ಲೌಕಿಕ ಮಾತಿನಲ್ಲಿ ಅಲೌಕಿಕತೆಯಿರಲಿ, ಈ ಶರೀರದ ಕೆಲಸಕ್ಕಾಗಿ ನಡೆಯುತ್ತಿದ್ದಾಗಲೂ, ಶರೀರದ ಕಾಲುಗಳಿಂದ ಲೌಕಿಕ ಕಾರ್ಯದ ಕಡೆಗೆ ಹೋಗುತ್ತಿದ್ದೇನೆ ಆದರೆ ಬುದ್ಧಿಯಿಂದ ತಮ್ಮ ಅಲೌಕಿಕ ದೇಶ, ಕಲ್ಯಾಣದ ಕಾರ್ಯಕ್ಕಾಗಿ ಹೋಗುತ್ತಿದ್ದೇನೆ ಎಂದು ಯೋಚಿಸಬೇಕು.* ಕಾಲುಗಳು ಇಲ್ಲಿ ನಡೆಯುತ್ತಿವೆ ಆದರೆ ಬುದ್ಧಿ ನೆನಪಿನ ಯಾತ್ರೆಯಲ್ಲಿದೆ. **ಶರೀರಕ್ಕೆ ಭೋಜನ ಕೊಡುತ್ತಿರುವಿರಿ ಆದರೆ ಆತ್ಮಕ್ಕೆ ನೆನಪಿನ ಭೋಜನ ಕೊಡಿ. ಈ ನೆನಪೇ ಆತ್ಮಕ್ಕೆ ಭೋಜನ, ಯಾವ ರೀತಿ ಶರೀರಕ್ಕೆ ಭೋಜನ ಕೊಡುವಿರೋ ಅದೇ ರೀತಿ ಶರೀರದ ಜೊತೆಗೆ ಆತ್ಮಕ್ಕೂ ಶಕ್ತಿಯ, ನೆನಪಿನ ಬಲ ಕೊಡಬೇಕು.**

ತಮ್ಮಲ್ಲಿ ಪರಿವರ್ತನೆ ತರಲು ಏನು ಮಾಡಬೇಕಾಗುತ್ತದೆ? ಪ್ರತಿಯೊಂದು ವಸ್ತುವನ್ನು ಲೌಕಿಕದಿಂದ ಅಲೌಕಿಕತೆಯಲ್ಲಿ ಪರಿವರ್ತನೆ ಮಾಡಬೇಕು. ಅದರಿಂದ ಜನರಿಗೆ ಇದೊಂದು ವಿಶೇಷ ಅಲೌಕಿಕ ಆತ್ಮವೆಂದು, ಲೌಕಿಕದಲ್ಲಿರುತ್ತಾ ನಾವು ಜನರಿಗಿಂತ ಭಿನ್ನವಾಗಿದ್ದೇವೆ ಎಂದು ಗೊತ್ತಾಗಲಿ, ತಮ್ಮನ್ನು ಆತ್ಮಿಕ ರೂಪದಲ್ಲಿ ಅತೀತ(ನಿರ್ಲಿಪ್ತ) ಎಂದು ತಿಳಿದುಕೊಳ್ಳಿ. ಕರ್ತವ್ಯದಿಂದ ನಿರ್ಲಿಪ್ತರಾಗುವುದು ಸಹಜ ಆದರೆ ಜಗತ್ತಿಗೆ ಪ್ರಿಯರಾಗುವುದಿಲ್ಲ. ಶರೀರದಿಂದ ಅತೀತರಾಗಿ ಆತ್ಮಿಕ ರೂಪದಲ್ಲಿ ಕಾರ್ಯ ಮಾಡಿದಾಗಲೇ ಪ್ರಪಂಚಕ್ಕೆ ಪ್ರಿಯರಾಗಲು ಸಾಧ್ಯ. ಆದ್ದರಿಂದ ಕೇವಲ ಪ್ರಪಂಚದ ಮಾತುಗಳಿಂದ ಅತೀತರಾಗುವುದಲ್ಲ, ಮೊದಲು ತಮ್ಮ ಶರೀರದಿಂದ ಅತೀತರಾಗಬೇಕು. ಯಾವಾಗ ಶರೀರದಿಂದ ಅತೀತರಾಗುವಿರೋ ಆಗ ಪ್ರಿಯರಾಗುವಿರಿ. ತಮ್ಮ ಮನಕ್ಕೆ, ಪ್ರಭುವಿಗೆ ಮತ್ತು ಲೋಕಕ್ಕೆ ಪ್ರಿಯರಾಗುತ್ತೀರಿ. ಈಗ ಜನರಿಗೆ ಏಕೆ ಪ್ರಿಯರಾಗಿಲ್ಲ? ಏಕೆಂದರೆ ಇನ್ನೂ ತಮ್ಮ ಶರೀರದಿಂದ ಅತೀತರಾಗಿಲ್ಲ. ಕೇವಲ ದೇಹದ ಸಂಬಂಧಿಕರಿಂದ ನಿರ್ಲಿಪ್ತರಾಗುವ ಪ್ರಯತ್ನ ಮಾಡುತ್ತಿರುವಿರಿ ಆದ್ದರಿಂದ ಅವರು ದೂರು ಕೊಡುತ್ತಾರೆ. ತಮ್ಮಲ್ಲಿರುವ ಅಭಿಮಾನದಿಂದ ತಾವು ಯಾವ ಪರಿವರ್ತನೆ ತಂದಿರುವಿರಿ? ಇಲ್ಲಿಯವರೆಗೆ ದೇಹದ ಅಭಿಮಾನದಿಂದ ಅತೀತರಾಗಿಲ್ಲ ಆದ್ದರಿಂದ ದೂರುಗಳು ಸಿಗುತ್ತವೆ. ಮೊದಲು ದೇಹದ ಅಭಿಮಾನದಿಂದ ಅತೀತರಾಗಿ ಆಗ ದೂರುಗಳು ಇರುವುದಿಲ್ಲ. ಇನ್ನೂ ಹೆಚ್ಚು ಲೋಕಪ್ರಿಯರಾಗುವಿರಿ. ಕೆಲವರು ತಮ್ಮನ್ನು ನೋಡಿದಾಗ ಹೊರಗಿನ ಮಾತುಗಳನ್ನು ನೋಡಿ ಮೊದಲು ಆ ವಿಷಯಗಳನ್ನು ಬದಲಾಯಿಸುತ್ತಾರೆ ಅನಂತರ ತಮ್ಮನ್ನು ಪರಿವರ್ತಿಸಿಕೊಳ್ಳುತ್ತಾರೆ. ಆದ್ದರಿಂದ ಪ್ರಭಾವ ಬೀಳುವುದಿಲ್ಲ. ಪ್ರಭಾವ ಬೀರಲು ಮೊದಲು ತಮ್ಮಲ್ಲಿ ಪರಿವರ್ತನೆಯನ್ನು ತನ್ನಿ. ತಮ್ಮ ದೃಷ್ಟಿ, ವೃತ್ತಿ, ಸ್ಮೃತಿ, ಸಂಪತ್ತು ಮತ್ತು ಸಮಯವನ್ನು ಪರಿವರ್ತನೆ ಮಾಡಿ ಆಗ ಜಗತ್ತಿಗೆ ಪ್ರಿಯರಾಗುವಿರಿ. ಏಕೆಂದರೆ ಸಂಪೂರ್ಣರಾಗಿ ಮುಂದೆ ಏನು ಮಾಡುವುದು? ನಡೆ-ನುಡಿ ಹೇಗಿರಬೇಕು ಎಂಬುದನ್ನು ಹೇಳುತ್ತಿದ್ದೇವೆ. ತಮ್ಮೆಲ್ಲರ ಸ್ಮೃತಿಚಿಹ್ನೆ ಶಾಸ್ತ್ರಗಳಲ್ಲಿ ಹೇಳಿದೆಯಲ್ಲವೇ? ಸಂಪೂರ್ಣ ಸಮರ್ಪಣೆ ಯಾರು ಮತ್ತು ಯಾರನ್ನು ಮಾಡಿದರು ಮತ್ತು ಎಷ್ಟರಲ್ಲಿ ಮಾಡಿದರು? ಸ್ಮೃತಿಚಿಹ್ನೆ ನೆನಪಿಗೆ ಬರುತ್ತಿದೆಯೇ? (ಜನಕ ರಾಜನಂತೆ) ಅವರನ್ನು ಮಕ್ಕಳು ಮಾಡಿಸಿದರು ಆದರೆ ತಂದೆ ಮಾಡಿಸಿರುವ ಸ್ಮೃತಿಚಿಹ್ನೆ ಸಹ ಇದೆ. ವಿಷ್ಣು ಪುರಾಣದಲ್ಲಿ ವಾಮನ ಅವತಾರದ ಬಗ್ಗೆ ಹೇಳುತ್ತಾರೆ. ವಾಮನ ಎಂದರೆ ಅತಿ ಚಿಕ್ಕ ಎಲ್ಲಕ್ಕಿಂತ ಚಿಕ್ಕ ರೂಪ ಯಾರದು? ಆತ್ಮ ಮತ್ತು ಪರಮಾತ್ಮನದು. ತಂದೆ ಬಂದು ಬಲಶಾಲಿಯಾದ ಮಾಯೆ ಎಂಬ ಬಲಿ (ಅಸುರ ಚಕ್ರವರ್ತಿ)ಯಿಂದ ಮೂರು ಹೆಜ್ಜೆಗಳಲ್ಲಿ ಎಲ್ಲವನ್ನು ತೆಗೆದುಕೊಂಡ ಎಂದರೆ ಸಂಪೂರ್ಣ ಸಮರ್ಪಣೆ ಮಾಡಿಸಿದ. ತಮಗೂ ಸಂಪೂರ್ಣ ಸಮರ್ಪಣೆ ಮಾಡಬೇಕು ಎಂದರೆ ಮಾಯೆಯ ಬಲವೇನಿದೆಯೋ ಅದೆಲ್ಲವನ್ನೂ ತ್ಯಾಗ ಮಾಡಬೇಕು. ಮಾಯೆಗೆ ಬಲಿಯಾಗಬಾರದು ಆದರೆ ಈಶ್ವರೀಯ ಶಕ್ತಿಯಲ್ಲಿ ಬಲವಂತರಾಗಬೇಕು. ಅಲ್ಲಿ ಹೇಗೆ ಮೂರು ಹೆಜ್ಜೆಗಳನ್ನು ತೋರಿಸುತ್ತಾರಲ್ಲವೇ? ಸಂಪೂರ್ಣ ಸಮರ್ಪಣೆ ಬರಲು ಯಾವ ಮೂರು ಮಾತುಗಳನ್ನು ಹೇಳುತ್ತಾರೆ? ಮನ, ವಚನ ಮತ್ತು ಕರ್ಮಕ್ಕೆ ಯಾವ ಶಿಕ್ಷಣವನ್ನು ಕೊಡಲಾಗುತ್ತದೆ? ಯಾವ ಮೂರು ಮಾತುಗಳನ್ನು ನೆನಪಿಟ್ಟುಕೊಂಡರೆ ಸಂಪೂರ್ಣ ಸಮರ್ಪಣೆಯಾಗುವಿರಿ? *ಒಂದು ದೇಹ ಸಹಿತ ಎಲ್ಲಾ ಸಂಬಂಧಗಳ ತ್ಯಾಗ, ನನ್ನೊಬ್ಬನನ್ನೇ ನೆನಪು ಮಾಡಿ. ಇದಾಯ್ತು ಮನಸ್ಸಿಗೆ, ಮಾತಿಗಾಗಿ ಯಾವ ಶಿಕ್ಷಣ ಸಿಗುತ್ತದೆ? ಪ್ರತಿ ಸಮಯ ಹೇಗೆ ಮುತ್ತುಗಳನ್ನು ಆರಿಸಲಾಗುತ್ತದೆ ಹಾಗೆಯೇ ಮುಖದಿಂದ ರತ್ನಗಳು ಬರಬೇಕು. ಪರಸ್ಪರರು ಕಲ್ಲನ್ನಲ್ಲ ಆದರೆ ಜ್ಞಾನ ರತ್ನಗಳ ದಾನ ಮಾಡಬೇಕು ಮತ್ತು ಕರ್ಮಕ್ಕಾಗಿ ನಾನು ಯಾವ ಕರ್ಮ ಮಾಡುವೆನೋ ನನ್ನನ್ನು ನೋಡಿ ಎಲ್ಲರೂ ಮಾಡುವರು ಎಂಬುದನೇ ನೆನಪಿಟ್ಟುಕೊಳ್ಳಿ. ಎರಡನೆಯ ಮಾತಾಗಿದೆ ಏನನ್ನು ಮಾಡುತ್ತೇವೆಯೋ ಅದನ್ನು ಪಡೆಯುತ್ತೇವೆ.* ಈ ಎರಡು ಮಾತುಗಳು ನೆನಪಿನಲ್ಲಿದ್ದರೆ ಕರ್ಮದಲ್ಲಿ ಬಲ ಸಿಗುತ್ತದೆ ಅರ್ಥಾತ್ ಯಾರೆಲ್ಲರ ಸಂಪರ್ಕದಲ್ಲಿ ಬರುತ್ತೀರೋ ಅವರಿಂದ ಬಲ ಸಿಗುತ್ತದೆ. ತಿಳಿಯಿತೇ? ಮನ, ವಚನ, ಕರ್ಮಕ್ಕೆ ಈ ಮುಖ್ಯ ಮಾತುಗಳನ್ನು ನೆನಪಿಟ್ಟುಕೊಂಡಾಗ ಸಂಪೂರ್ಣ ಸಮರ್ಪಣೆಯನ್ನು ಅವಿನಾಶಿ ಮಾಡಿಕೊಳ್ಳಬಹುದು. ಇಲ್ಲಿ ಸಂಪೂರ್ಣ ಸಮರ್ಪಣೆಯ ನಶೆಯೇರಿ ನಂತರ ಕಡಿಮೆಯಾಗುವುದು, ನಾವು ಸಂಪೂರ್ಣ ಸಮರ್ಪಣೆಯಾಗಿದ್ದೇವೆ ಎಂಬ ಅವಿನಾಶಿ ನೆನಪು ತಮ್ಮನ್ನು ಅವಿನಾಶಿಯಾಗಿಡುವುದು. ಒಂದು ವೇಳೆ ತಾವು ಸ್ವಲ್ಪ ತಳಮಳಗೊಂಡರೆ ಸಮಸ್ಯೆ ತಳಮಳ ತರುವುದು. ತಾವು

ಕೋಲಾಹಲದಲ್ಲಿ ಬರುವುದನ್ನು ಮತ್ತು ಸಮಸ್ಯೆಗಳನ್ನು ನೋಡಿ ಜನ ಮಜಾ ಮಾಡುವರು. ಬಾಪ್ ದಾದಾರಂತೂ ನೋಡುತ್ತಾ ಇರುತ್ತಾರೆ.

ಯಾರ ಜೊತೆಗೆ ಇರುವಿರಿ? ಜೊತೆಗಾರರು ಕೈ ಬಿಟ್ಟರೆ ಏನು ಮಾಡುವಿರಿ? ಎಲ್ಲರೂ ತಮ್ಮ ಜೊತೆಯನ್ನು ನಿಭಾಯಿಸಿ, ಬಾಪ್ ದಾದಾ ಒಂದಿಲ್ಲ ಒಂದು ರೂಪದಲ್ಲಿ ಶ್ವಾಸ ನಿಲ್ಲುವವರಿಗೂ ಜೀವ ಬರುವಂತೆ ಜೊತೆ ಕೊಡಲು ಎಂದರೆ ಕೈ ಹಿಡಿಯಲು ಪ್ರಯತ್ನಪಡುತ್ತಾರೆ. ಆದರೆ ಕೆಲವರು ಆಮ್ಲಜನಕವನ್ನು ಹಚ್ಚಲು ಕೊಡುವುದಿಲ್ಲ. ಅದರ ಪೈಪನ್ನೇ ಕಿತ್ತೆಸೆದರೆ ಏನು ಮಾಡುವುದು? ವಾಸ್ತವದಲ್ಲಿ ಸಹಯೋಗ ಬೇಡುವ ವಸ್ತುವಲ್ಲ, ಸಹಯೋಗ ಸ್ನೇಹಿಗೆ ಸ್ವತಃವಾಗಿ ಪ್ರಾಪ್ತಿಯಾಗುತ್ತದೆ, ಆದರೂ ಬಾಪ್ ದಾದಾರವರಿಂದ ಸಹಯೋಗವನ್ನು ಪಡೆಯಬೇಕೆಂದರೆ ತಾವು ಬಾಪ್ ದಾದಾರ ಸ್ನೇಹಿಯಾಗಿ ಆಗ ಸಹಯೋಗ ಸ್ವತಃ ಸಿಗುವುದು. ಬೇಡುವ ಅವಶ್ಯಕತೆಯಿಲ್ಲ. ಅರ್ಧ ಕಲ್ಪ ಭಕ್ತರಾಗಿ ಬೇಡುತ್ತಿದ್ದಿರಿ. ಈಗ ಮಕ್ಕಳಾಗಿಯೂ ಬೇಡುತ್ತಿದ್ದರೆ ಭಕ್ತರು ಹಾಗೂ ಮಕ್ಕಳಲ್ಲಿ ಅಂತರವೇನು? ಅದರ ಕಾರಣವಾಗಿದೆ ಅಜ್ಞಾನಿಯಾಗಿ ಸಹಯೋಗ ಬೇಡುತ್ತೀರಿ ಅಧಿಕಾರಿಯೆಂದು ತಿಳಿದುಕೊಳ್ಳಿ ಆಗ ಬೇಡುವ ಅವಶ್ಯಕತೆಯಿರುವುದಿಲ್ಲ. ಆದದ್ದು ಆಗಿ ಹೋಯಿತು. ಗತಿಸಿ ಹೋದುದಕ್ಕೆ ಚಿಂತಿಸದೇ, ಅದರಿಂದ ಪಾಠ ಕಲಿತು ಭವಿಷ್ಯದಲ್ಲಿ ಎಚ್ಚರಿಕೆಯಿಂದಿರಿ, ಕಳೆದು ಹೋದ ಮಾತುಗಳನ್ನು ಯೋಚಿಸುತ್ತಿದ್ದರೆ ಅದೂ ಒಂದು ಸಮಸ್ಯೆಯಾಗುವುದು. ಸಮಸ್ಯೆಗಳು ಬಹಳ ಬರುವವು, ಇದೂ ಒಂದು ಹೊಸ ಸಮಸ್ಯೆಯಾಗಿ ನಿಲ್ಲುವುದು, ಗತಿಸಿ ಹೋದುದನ್ನು ಪರಿವರ್ತಿಸಲು, ಶಕ್ತಿಯನ್ನು ತುಂಬುವ ರೂಪದಲ್ಲಿ ಯೋಚಿಸಿ. ಒಂದು ವೇಳೆ ಏಕೆ ಹೀಗೆ ಹೇಗಾಯಿತು, ಈಗ ಹೇಗಾಗುವುದು, ದಾಟಿ ಮುಂದೆ ಹೋಗಬಹುದಾ ಇಲ್ಲವಾ ಹೀಗೆ ಪ್ರಶ್ನೆ ಮಾಡಬೇಡಿ, ಪ್ರಶ್ನಾರ್ಥಕ ಚಿಹ್ನೆಯ ಬದಲು ಪೂರ್ಣ ವಿರಾಮ, ಬಿಂದುವಿಡಿ, ಬಿಂದು ಇಡುವುದು ಸಹಜವಾಗಿದೆ. ಎಲ್ಲರಿಗೂ ಪ್ರಶ್ನಾರ್ಥಕ ಚಿಹ್ನೆಯನ್ನಿಡವುದು ಬರಬಹುದು ಅಥವಾ ಬರದೇ ಇರಬಹುದು ಆದರೆ ಪ್ರಶ್ನೆ ಕೇಳುವುದು ಬರುತ್ತದೆ, ಬಿಂದು ಇಡುತ್ತಿದ್ದರೆ ಬಿಂದು ರೂಪದಲ್ಲಿ ಸ್ಥಿತರಾಗುವಿರಿ. ಸಂಗ್ರಹಾಲಯದಲ್ಲಿ ಅಥವಾ ಪ್ರದರ್ಶನಿಗಳಲ್ಲಿ ತಾವು ಜನರಿಗೆ ತಿಳಿಸಿದ ನಂತರ ಏನು ಮಾಡುತ್ತೀರಿ? ನಂತರ ಏನು ಮಾಡುವುದೆಂದು ಬರೆದ ಕೈಪಿಡಿ/ಹಾಳೆಗಳನ್ನು (handbill) ಹಂಚುವಿರಿ. ಇಂದು ಬಾಪ್ ದಾದಾ ಭಟ್ಟಿಯ ನಂತರ ತಾವೇನು ಮಾಡುವಿರೆಂದು ಕೇಳುತ್ತಿದ್ದಾರೆ? ಯಜ್ಞದ ಕಾರ್ಯವನ್ನು ಹೇಗೆ ಮುಂದುವರೆಸುವಿರಿ? ತಮ್ಮ ಉನ್ನತಿಯ ಸಾಧನೆಯೇನು ಮಾಡುವಿರಿ? ದೈವೀ ಗುಣ ಧಾರಣೆ ಮಾಡುವುದು, ಸ್ನೇಹಿಯಾಗುವುದು ಇದನ್ನಂತೂ ಮಾಡಲೇಬೇಕು ಆದರೆ ಪ್ರಾಯೋಗಿಕ ರೂಪದಲ್ಲಿ ಏನು ಕೊಡುವಿರಿ? ತಾವೇ ಹೇಳಿದಂತೆ ತಮ್ಮ, ಬಾಪ್ ದಾದಾರ, ಪರಿವಾರದ ಸ್ನೇಹಿ-ಸಹಯೋಗಿಯಾಗುವಿರಿ. ಆದರೆ ಅದೂ ಸಹ ಯಾವಯಾವ ವಿಷಯಗಳಲ್ಲಿ ಆಗುವಿರಿ. ಮನ - ವಚನ – ಕರ್ಮದ ಜೊತೆಗೆ ತನು- ಮನ-ಧನ ಈ ಮೂರೂ ರೂಪಗಳಲ್ಲಿ ತಮ್ಮನ್ನು ಪರಿವರ್ತನೆ ಮಾಡಿಕೊಳ್ಳಬೇಕು. ಸಹಯೋಗಿ ಮತ್ತು ಪ್ರಾಮಾಣಿಕರಾಗಬೇಕು. ಈ ಎರಡೂ ಮಾತುಗಳಿದ್ದಾಗ ಬಾಪ್ ದಾದಾ ಮತ್ತು ಪರಿವಾರದ ಸ್ನೇಹಿ ಮತ್ತು ಸಹಯೋಗಿಯಾಗುವಿರಿ. ಯಾರು ಸಹಯೋಗಿಯಾಗಿರುವರೋ ಅವರನ್ನು ಹೇಗೆ ಗುರುತಿಸುವುದು? ಅವರು ಪರಿವಾರ ಮತ್ತು ಬಾಪ್ ದಾದರ ವಿಚಾರ ಮತ್ತು ಕರ್ಮಗಳಲ್ಲಿ ಪರಸ್ಪರ ಸಮೀಪವಿರುವರು. ಪರಸ್ಪರರ ಮತಗಳಿಗೆ ಸಮೀಪ ಬರುವರು ಆಗ ಮತಭೇದ ಸಮಾಪ್ತಿಯಾಗುವುದು. ಮೊದಲನೆಯದು ಸಹಯೋಗಿ ಮತ್ತು ಪ್ರಾಮಾಣಿಕತನದ ವಿಧಿಯನ್ನು ಹೇಳಿದೆವು. ಎರಡನೆಯ ಮಾತಾಗಿದೆ ಯಾರೆಲ್ಲ ಸಂಪೂರ್ಣ ಸಮರ್ಪಿತರಾಗುವರೋ ಅವರಿಗೆ ತಮ್ಮ ತನು-ಮನ-ಧನ ಮತ್ತು ಸಮಯ ಈ ನಾಲ್ಕನ್ನು ಎಲ್ಲಿ ಉಪಯೋಗಿಸಬೇಕು? ಅವಶ್ಯವಾಗಿ ಪ್ರವೃತ್ತಿ ಮಾರ್ಗದ ಕಡೆಗೂ ಗಮನ ಕೊಡಬೇಕು ಆದರೆ ಈ ನಾಲ್ಕೂ ಯಥಾರ್ಥ ರೀತಿಯಲ್ಲಿ ಉಪಯೋಗವಾಗುತ್ತಿವೆಯೇ ಎಂಬ ನಿರ್ಣಯ ತಮ್ಮ ಮನದಲ್ಲಿ ಸರಿಯಾಗಿರಬೇಕು. ಸಂಪೂರ್ಣ ಸಮರ್ಪಿತ ಆತ್ಮ ನಿಜವಾಗಿಯೂ ತನು, ಮನ, ಧನ ಮತ್ತು ಸಮಯ ಎಷ್ಟು ಕೊಡಬೇಕೋ ಆ ಪ್ರಮಾಣ ಕೊಡುತ್ತಿದ್ದೇವೆಯೇ? ಎಂದು ಕೇಳಿಕೊಳ್ಳಬೇಕು. ತನು, ಮನ, ಧನ ಮತ್ತು ಸಮಯದ ಪ್ರಯೋಗವನ್ನು ಎಷ್ಟು ಮಾಡುತ್ತೇವೆ? ಎಂದು ಲೆಕ್ಕವನ್ನು ಮಾಡಿ. ಹೇಗೆ ತಮ್ಮ ಮನೆಯಲ್ಲಿ ಲೆಕ್ಕ ಇಡುತ್ತೀರೋ ಹಾಗೆಯೇ ಯಾರು ಸಂಪೂರ್ಣ ಸಮರ್ಪಣೆಯಾಗಿದ್ದೀರೋ ಅವರು ಈ ಲೆಕ್ಕವನ್ನು ಇಡಬೇಕು. ತನುವನ್ನು ಎಲ್ಲಿ ಮತ್ತು ಹೇಗೆ ಉಪಯೋಗಿಸಿದಿರಿ? ಇದನ್ನು ಸಂಕ್ಷಿಪ್ತವಾಗಿ ಆದರೆ ಸ್ಪಷ್ಟವಾಗಿ ಬರೆಯಬೇಕು ಏಕೆಂದರೆ ಕೆಲವು ವೇಳೆ ವಿಸ್ತಾರವಾಗಿರುತ್ತದೆ

ಆದರೆ ಸ್ಪಷ್ಟವಾಗಿರುವುದಿಲ್ಲ. ಆದ್ದರಿಂದ ಸಂಕ್ಷಿಪ್ತ ಹಾಗೂ ಸ್ಪಷ್ಟವಾಗಿರಲಿ. ಎಷ್ಟೆಷ್ಟು ಸಂಕ್ಷಿಪ್ತ ಮತ್ತು ಸ್ಪಷ್ಟವಾಗಿ ಬರೆಯುವಿರೋ ಅಷ್ಟು ಆಂತರಿಕ ಸ್ಥಿತಿಯೂ ಸ್ಪಷ್ಟ ಮತ್ತು ಮಾರ್ಗವೂ ಸ್ಪಷ್ಟ (clear) ಆಗುವುದು. ಸಂಕಲ್ಪಗಳನ್ನು ಸಂಕ್ಷಿಪ್ತಗೊಳಿಸಿದಾಗ ಸಮಾಚಾರವೂ ಸಂಕ್ಷಿಪ್ತವಾಗುವುದು ಮತ್ತು ಪುರುಷಾರ್ಥದ ಮಾರ್ಗ ಸ್ಪಷ್ಟವಾಗುವುದು. ಇದರಲ್ಲಿ ಎಲ್ಲಾ ಲೆಕ್ಕ ಬರುವುದು. ಮೂರನೆಯ ನೆನಪಿಟ್ಟುಕೊಳ್ಳುವ ಮಾತಾಗಿದೆ - ಇಲ್ಲಿಯವರೆಗೂ ಪುರುಷಾರ್ಥದ ಕೊರತೆಯಿಂದ ಮನ, ವಚನ, ಕರ್ಮದಲ್ಲಿ ಏನೆಲ್ಲ ತಪ್ಪುಗಳಾಗಿದ್ದವೋ ಅವುಗಳನ್ನು ಹೊಸ ಜನ್ಮವಾದಂತೆ ಬುದ್ಧಿಯಿಂದ ಪೂರ್ಣ ಮರೆತು ಬಿಡಿ. ಪುರುಷಾರ್ಥದಲ್ಲಿ ಏನೆಲ್ಲಾ ದುರ್ಬಲತೆಯ ಮಾತುಗಳಿವೆಯೋ ಅವೆಲ್ಲವನ್ನು ಇಲ್ಲಿಯೇ ಬಿಟ್ಟು ಹೋಗಬೇಕು. ನಂತರ ಪತ್ರಗಳಲ್ಲಿ ಹಳೆಯ ಸಂಸ್ಕಾರದ ಕಾರಣ ಹೀಗಾಯಿತೆಂದು ಬರೆಯಬಾರದು. ಸಂಪೂರ್ಣ ಸಮರ್ಪಣೆಯಾದೆವು ಎಂದು ಹೇಳುವಾಗ ದಾನ ಕೊಟ್ಟಂತಹ ವಸ್ತುವನ್ನು ಮತ್ತೆ ವಾಪಸ್ಸು ತೆಗೆದುಕೊಂಡರೆ ಅದರ ಪರಿಣಾಮ ಏನಾಗುವುದು ಎಂದು ಯೋಚಿಸಬೇಕು. ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳುವುದರಿಂದ ನಾಲ್ಕೂ ಮಾತುಗಳು ಪರಿವರ್ತನೆಯಾಗುವವು. ಮುಖದಿಂದ ಈ ರೀತಿಯ ಮಾತುಗಳು ಬರಬಾರದು. ಜ್ಞಾನದ ಅನೇಕ ಮಾತುಗಳನ್ನು ಉಲ್ಟಾ ರೂಪದಲ್ಲಿ ಧಾರಣೆ ಮಾಡಿಕೊಂಡ ಕಾರಣ ಸಮಸ್ಯೆಗಳು ಬರುತ್ತವೆ. ಏನೇ ತಪ್ಪಾದರೂ ನಾವಿನ್ನೂ ಸಂಪೂರ್ಣರಾಗಿಲ್ಲವೆಂದು, ಇನ್ನೂ ಸಮಯವಿದೆಯೆಂದು, ಪುರುಷಾರ್ಥಿಗಳಾಗಿದ್ದೇವೆ ಎಂದು ಹೇಳುವಿರಿ. ಪುರುಷಾರ್ಥಿ ತಪ್ಪು ಮಾಡುವ ಅವಕಾಶವಿಲ್ಲ ಆದರೆ ಇತ್ತೀಚೆಗೆ ಪುರುಷಾರ್ಥಿ ಎಂದರೆ ತಪ್ಪುಗಳಿಗೆ ಕ್ಷಮೆಯಿದೆ ಎಂದು ತಿಳಿದುಕೊಂಡಿದ್ದಾರೆ. ಇವರು ಹೀಗೆ ಮಾಡುತ್ತಾರೆ ಆಗ ನಮಗೂ ಹೀಗೆ ಮಾಡಬೇಕಾಗುತ್ತದೆ. ಹೀಗೆ **ಜ್ಞಾನಿಗಳ ಬದಲು ಅಜ್ಞಾನಿಗಳಾಗಿದ್ದಾರೆ. ಏನು ಮಾಡುತ್ತೇವೋ ಅದನ್ನು ಪಡೆಯುತ್ತೇವೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ನಾನೇನು ಮಾಡುತ್ತೇನೋ ಅದನ್ನು ನೋಡಿ ಬೇರೆಯವರು ಮಾಡುತ್ತಾರೆ. ಅವರನ್ನು ನೋಡಿ ನಾನು ಮಾಡಬಾರದು. ನನ್ನನ್ನು ನೋಡಿ ಬೇರೆಯವರು ಹಾಗೆಯೇ ಮಾಡುವಂತೆ ನಾನು ಕರ್ಮವಿರಬೇಕು. ಹೀಗೆ ಸಣ್ಣಪುಟ್ಟ ಮಾತುಗಳನ್ನು ಉಲ್ಟಾ ರೂಪದಲ್ಲಿ ಧಾರಣೆ ಮಾಡಿ ಕೊಂಡಿದ್ದೀರಿ. ಜ್ಞಾನದ ಸರಿಯಾದ ಲಾಭವನ್ನು ತೆಗೆದುಕೊಳ್ಳುವ ಬದಲು ಉಲ್ಟಾ ರೂಪದಲ್ಲಿ ಪ್ರಯೋಗ ಮಾಡುವುದರಿಂದ ಪುರುಷಾರ್ಥದಲ್ಲಿ ದುರ್ಬಲತೆ ಬರುತ್ತದೆ. ಇವು ಮರುಷಾರ್ಥಹೀನ ಮಾತುಗಳಾಗಿವೆ ಆದರೆ ಇದೇ ಪುರುಷಾರ್ಥಿ ಜೀವನ ಎಂದು ತಿಳಿದುಕೊಂಡಿದ್ದೀರಿ. ಆದ್ದರಿಂದ ಈ ಜ್ಞಾನದ ಮಾತುಗಳನ್ನು ತಮ್ಮ ಪುರುಷಾರ್ಥದ ಕೊರತೆಯನ್ನು ಬಚ್ಚಿಟ್ಟುಕೊಳ್ಳುವ ಸಾಧನ ಮಾಡಿಕೊಂಡಿದ್ದೀರಿ** . ಈ ಸಾಧನಗಳನ್ನು ನಾಶಮಾಡಿ. ಆಗ ಎಲ್ಲ ಸಮಸ್ಯೆಗಳು ತಮ್ಮಿಂದ ತಾವೇ ಸಮಾಪ್ತಿಯಾಗುವವು. ನಾಲ್ಕು ಶಕ್ತಿಗಳನ್ನು ಧಾರಣೆ ಮಾಡಿಕೊಳ್ಳಿ. ಹಾಗೆ ನೋಡಿದರೆ ಒಂದೇ ಈಶ್ವರೀಯ ಶಕ್ತಿಯಾಗಿದೆ ಆದರೆ ಸ್ಪಷ್ಟಮಾಡಲು ಹೇಳಲಾಗುತ್ತಿದೆ. 1) ಸಮಾವೇಶ ಗೊಳಿಸುವ ಶಕ್ತಿ ಎಂದರೆ ಸಂಕ್ಷಿಪ್ತಮಾಡುವ ಶಕ್ತಿ. 2) ಅಳವಡಿಸಿಕೊಳ್ಳುವ ಶಕ್ತಿ 3) ಸಹನೆ ಮಾಡುವ ಶಕ್ತಿ 4) ಎದುರಿಸುವ ಶಕ್ತಿ ಆದರೆ ಯಾವುದನ್ನು ಎದುರಿಸಬೇಕು? ಬಾಪ್ ದಾದಾ ಅಥವಾ ದೈವೀ ಪರಿವಾರವನ್ನಲ್ಲ. ಮಾಯೆಯ ಶಕ್ತಿಯನ್ನು ಎದುರಿಸುವ ಶಕ್ತಿ, ಈ ನಾಲ್ಕೂ ಶಕ್ತಿಗಳನ್ನು ಧಾರಣೆ ಮಾಡಿದರೆ ಸಂಪೂರ್ಣ ಸಮರ್ಪಣೆಯನ್ನು ಅವಿನಾಶಿಯಾಗಿ ಇಟ್ಟುಕೊಳ್ಳಬಹುದು. ಒಂದು ಸಣ್ಣದು (short) ಮಾಡಿ ಮತ್ತು ಬೇರ್ಪಡಿಸಿ (Sort) ಮಾಡಿ, ಇದನ್ನು ಮಾಡಬೇಕು, ಇದನ್ನು ಯೋಚಿಸಬೇಕು, ಇದನ್ನಲ್ಲ, ಇದಾಗಬೇಕು, ಇದಲ್ಲ. ಹೀಗೆ ಬೇರ್ಪಡಿಸಿ ಮತ್ತು ಎಷ್ಟು ಸಾಧ್ಯವೋ ಅಷ್ಟು ಸಂಕ್ಷಿಪ್ತಗೊಳಿಸಿ. 10 ಶಬ್ದಗಳ ಬದಲು 2 ಶಬ್ದಗಳಲ್ಲಿ ಸಾರವನ್ನು ಹೇಳಿ, ಹೀಗೆ ಸಂಕ್ಷಿಪ್ತಗೊಳಿಸುತ್ತಾ ಪೂರ್ಣ ಸಂಕ್ಷಿಪ್ತವಾಗುವಿರಿ. ಇಂತಹ ಪುರುಷಾರ್ಥವನ್ನು ಈ ಭಟ್ಟಿಯ ನಂತರ ಮಾಡಿ, ಹೇಗೆ ಬಾಪ್ ದಾದಾ ಅವರು ಮಕ್ಕಳನ್ನು ಸೃಷ್ಟಿಯ ಮುಂದೆ ಪ್ರತ್ಯಕ್ಷ ಮಾಡಿರುವರೋ ಹಾಗೆಯೇ ಈಗ ಪ್ರತಿ ಕರ್ಮದಿಂದ, ಪ್ರತಿಯೊಂದು ಮಾತಿನಿಂದ ಬಾಪ್ ದಾದಾ ಅವರನ್ನು ಅನೇಕ ಆತ್ಮರ ಮುಂದೆ ಪ್ರತ್ಯಕ್ಷ ಮಾಡುವುದು ಮಕ್ಕಳ ಕರ್ತವ್ಯವಾಗಿದೆ. ಎಂಬ ಈ ಮಾತನ್ನೂ ನೆನಪಿಟ್ಟುಕೊಳ್ಳಬೇಕು. ಇಲ್ಲಿಯವರೆಗೆ ನಾವು ತಂದೆಯ ಸಂದೇಶವನ್ನು ಕೊಟ್ಟೆವು ಆದರೆ ಆ ಸಂದೇಶದಿಂದ ಆತ್ಮರಲ್ಲಿ ಬಾಪ್ ದಾದಾರ ಸ್ನೇಹ ಮತ್ತು ಸಂಬಂಧವನ್ನು ಪ್ರತ್ಯಕ್ಷ ಮಾಡಿದೆವಾ? ಎಂಬ ತಮ್ಮ ಈ ಚಾರ್ಟ್ ನೋಡಿ. ಇಲ್ಲವಾದರೆ ಯಾವ ಸೇವೆ ಉಳಿಯಿತು? ಅರ್ಧ ಸೇವೆ ಮಾಡಬಾರದು. ಈಗ ಸಂಪೂರ್ಣ ಸಮರ್ಪಣೆಯಾಗಿರುವಿರಿ ಎಂದರೆ ಸಂಪೂರ್ಣ ಸೇವೆಯನ್ನು ಮಾಡಿ. ಆದ್ದರಿಂದ ಇಂದು ನಾನು ಮನ, ವಚನ, ಕರ್ಮದಿಂದ

ಎಷ್ಟು ಆತ್ಮರಿಗೆ ಬಾಪ್ ದಾದಾರ ಸ್ನೇಹ ಮತ್ತು ಸಂಬಂಧವನ್ನು ಪ್ರತ್ಯಕ್ಷ ಮಾಡಿದ್ದೇನೆ? ಎಂಬುದನ್ನು ಪ್ರತಿಯೊಬ್ಬರೂ ಪರಿಶೀಲನೆ ಮಾಡಿಕೊಳ್ಳಬೇಕು. ಕೇವಲ ಸಂದೇಶವನ್ನು ಕೊಡುವುದು ಸೇವೆಯಲ್ಲ, ಸಂದೇಶ ಕೊಡುವುದು ಎಂದರೆ ಅವರನ್ನು ತಮ್ಮ ಸಂಬಂಧಿಗಳನ್ನಾಗಿ ಮಾಡಿಕೊಳ್ಳುವುದು. ತಮ್ಮ ಸಂಬಂಧಿಗಳನ್ನಾಗಿ ಮಾಡಿಕೊಳ್ಳುವುದು ಅರ್ಥಾತ್ ಶಿವವಂಶಿ ಬ್ರಹ್ಮಾಕುಮಾರ-ಕುಮಾರಿಯರನ್ನಾಗಿ ತಯಾರು ಮಾಡುವುದು. ಅವರನ್ನು ಸ್ನೇಹಿಗಳನ್ನಾಗಿ ಮಾಡಿಕೊಂಡಾಗ ತಮ್ಮ ಸಂಬಂಧಿಗಳನ್ನಾಗಿ ಮಾಡಿಕೊಳ್ಳಲು ಸಾಧ್ಯ. ಸ್ನೇಹಿಗಳಾಗುವುದರಿಂದ ಸಂಬಂಧಿಗಳಾಗುವರು. ಕೇವಲ ಸಂದೇಶ ಕೊಡುವುದು ಇರುವೆಯ ಮಾರ್ಗದ ಸೇವೆಯಾಗಿದೆ, ಇದಾಗಿದೆ ವಿಹಂಗ ಮಾರ್ಗದ ಸೇವೆ. ಬಾಪ್ ದಾದಾ ತಮ್ಮ ಕರ್ತವ್ಯವನ್ನು ಹೇಗೆ ಗುಪ್ತ ವೇಷದಲ್ಲಿ ಮಾಡುತ್ತಿದ್ದಾರೆಂದು ಜಗತ್ತಿನಲ್ಲಿ ಪ್ರಚಾರ ಮಾಡಿ. ಅವರನ್ನು ಈ ಸ್ನೇಹ, ಸಂಬಂಧದಲ್ಲಿ ತನ್ನಿ. ಎಲ್ಲರೂ ತಮ್ಮ ಸಂಬಂಧಿಕರಲ್ಲವೇ? ಹಾಗಾದರೆ ಸಂಬಂಧಿಕರಿಗೆ ತಮ್ಮ ಸಂಬಂಧವನ್ನು ನೆನಪು ಮಾಡಿಸಿ. ಅಗಲಿದ ಆತ್ಮರನ್ನು ಸ್ನೇಹಿ ಮಾಡಿಕೊಳ್ಳಿ. ಈಗ ಸೇವೆಯ ಗುಪ್ತರೂಪವಿದೆ, ಪ್ರತ್ಯಕ್ಷ ರೂಪವಿಲ್ಲ. ಸಂಗ್ರಹಾಲಯಕ್ಕೆ ಬರುತ್ತಾರೆ ಬಾಹ್ಯದ ಪ್ರತ್ಯಕ್ಷ ರೂಪ ಮತ್ತು ವಸ್ತುಗಳಿವೆ. ಆದರೆ ಸೇವೆಯ ರೂಪ ಇನ್ನೂ ಗುಪ್ತವಾಗಿದೆ. ಸೇವೆಯ ರೂಪ ಪ್ರತ್ಯಕ್ಷವಾದಾಗ ಪ್ರತ್ಯಕ್ಷತೆಯಾಗುವುದು, ಸಂದೇಶ ಕೊಡಲು ಹೋಗಿ. ಪ್ರದರ್ಶನಗಳನ್ನೂ ಮಾಡಿ ಆದರೆ ನಂತರ ಅವರಿಗೆ ಏನು ಹೇಳುತ್ತೀರೋ ಅದನ್ನು ನೀವೂ ಮಾಡಿ. ಈಗ ಸಮಯ ಯಾವುದು ಮತ್ತು ಯಾವ ಕರ್ತವ್ಯ ನಡೆದಿದೆ ಎಂಬುದನ್ನು ಜಗತ್ತಿಗೆ ಹೇಗೆ ತಿಳಿಸುವುದು ಎಂದು ಪರಸ್ಪರ ಸೇರಿಕೊಂಡು ಆಲೋಚಿಸಿ. ಯಾವುದೇ ರೀತಿಯಿಂದ ಪ್ರಚಾರವಾಗಬೇಕು. ಸಮಾಚಾರ ಪತ್ರಿಕೆಗಳಿಂದ ಸೇವೆಯಾಗಬೇಕು ಅದಿನ್ನೂ ಆಗಿಲ್ಲ. ಒಂದು ಸಂಘಟನೆಯ ರೂಪದಲ್ಲಿ, ಪರಸ್ಪರರನ್ನು ಅರಿತು, ಸಹಯೋಗಿಗಳಾಗಿ ಬೇಹದ್ದಿನ ಸೇವೆಯನ್ನು ಬೇಹದ್ದಿನ ರೂಪದಲ್ಲಿ ತರಬೇಕು.

ಬಾಪ್ ದಾದಾ ಬಯಸುವಂತೆ ನಾವು 100% ಮಾಡಿ ತೋರಿಸುತ್ತೇವೆ ಎಂಬ ಉತ್ಸಾಹ ಈ ಗುಂಪಿನಲ್ಲಿ ಪ್ರತ್ಯಕ್ಷ ರೂಪದಲ್ಲಿ ಎಲ್ಲರಿಗೂ ಇದೆ. ಪ್ರತ್ಯಕ್ಷ ರೂಪದಲ್ಲಿರುವುದರಿಂದ ಪೂರ್ಣವಾಗುವುದು. ಲೌಕಿಕ ಕಾರ್ಯದಿಂದಲೂ ಎಲ್ಲರೂ ಸಮರ್ಪಿತರಾಗಬೇಕು ಎಂದು ಎಲ್ಲರ ಮನದಲ್ಲಿ ಏನಿದೆಯೋ ಆ ದಿನಗಳು ಸಮೀಪದಲ್ಲಿವೆ. ಆದರೆ ಮನಸ್ಸಿನಿಂದ ಸಮರ್ಪಿತರಾದಾಗ ಅದು ಸಾಧ್ಯ. ಆಮೇಲೆ ಲೌಕಿಕ ಕಾರ್ಯದಿಂದ ಸಮರ್ಪಿತರಾಗುವುದು ತಡವಾಗುವುದಿಲ್ಲ. ಈ ಬಾರಿ ಮನದಿಂದ ಸಮರ್ಪಿತರಾಗಿ, ಯಾರ ಫಲಿತಾಂಶ ಚೆನ್ನಾಗಿದೆಯೋ ನೋಡಿ ಅದರಂತೆ ನಂಬರ್ ಕೊಡುವೆವು. ಭಟ್ಟಿ ಇರಲಿ ಇಲ್ಲದಿರಲಿ ಆದರೆ ಮಧುಬನವೇ ಭಟ್ಟಿಯಾಗಿದೆ, ಮಧುಬನಕ್ಕೆ ಬರುತ್ತಿರಿ ಮತ್ತು ತಮ್ಮ ಅಮರರಾಗಿರುವ ಪ್ರಮಾಣವನ್ನು ಕೊಡುತ್ತಿರಿ. ಸಂಕಲ್ಪಗಳಿಂದ ಸಮರ್ಪಿತರಾಗುವುದು ಎಲ್ಲಕ್ಕಿಂತ ಹೆಚ್ಚಿನದಾಗಿದೆ. **ಯಾವ ವ್ಯರ್ಥ ಸಂಕಲ್ಪವೂ ಬರದಿರಲಿ. ಈ ವ್ಯರ್ಥ ಸಂಕಲ್ಪಗಳ ಕಾರಣದಿಂದ ಸಮಯ ಮತ್ತು ಶಕ್ತಿ ವ್ಯರ್ಥವಾಗುತ್ತದೆ. ಆದ್ದರಿಂದ ಸಂಕಲ್ಪದಿಂದಲೂ ಸಂಪೂರ್ಣ ಸಮರ್ಪಣೆಯಾಗಬೇಕು,** ಮನಸ್ಸಿನ ಉತ್ಸಾಹವನ್ನು ಈಗ ಪ್ರಯೋಗದಲ್ಲಿ ತನ್ನಿ. ಒಳ್ಳೆಯದು – ಓಂ ಶಾಂತಿ.

ಅವ್ಯಕ್ತ ಮುರಳಿ 28-11-1969.

***ಲೌಕಿಕವನ್ನು ಅಲೌಕಿಕಕ್ಕೆ ಪರಿವರ್ತನೆ ಮಾಡುವ ಯುಕ್ತಿಗಳು.***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಆತ್ಮೀಯ ದೃಷ್ಟಿ ಮತ್ತು ವೃತ್ತಿಯನ್ನು ಹೊಂದಿರುವ ಸಂಪೂರ್ಣ ಸಮರ್ಪಣಾ ಸ್ವರೂಪ.

2. ನಾನು ಜಡ (ದೇಹ)ವನ್ನು ನೋಡುವಾಗ ಚೈತನ್ಯ ಆತ್ಮನನ್ನು ನೋಡುವ ಅಭ್ಯಾಸವನ್ನು ಮಾಡಿದ್ದೇನೆ.

3. ನಾನು ದೈಹಿಕ ವಸ್ತುವನ್ನಾಗಲಿ, ಲೌಕಿಕ ಸಂಬಂಧವನ್ನಾಗಲಿ, ಅಲೌಕಿಕಕ್ಕೆ ಪರಿವರ್ತಿಸಿಕೊಂಡಿದ್ದೇನೆ.

4. ನಾನು ಪ್ರತಿಯೊಬ್ಬರನ್ನೂ (ಲೌಕಿಕ ಸಂಬಂಧಿ, ಜ್ಞಾನಿಗಳು, ಅಜ್ಞಾನಿ, ಭಕ್ತರು) ಇವರೂ ಕೂಡ ಬ್ರಹ್ಮಾ ತಂದೆಯ ಪೀಳಿಗೆ, ನಂತರ ಬರುವ ಸಹೋದರರು ಬ್ರಹ್ಮ ವಂಶದವರು ಎಂಬ ಭಾವನೆಯಿಂದ ನೋಡುತ್ತಿದ್ದೇನೆ.

5. ನಾನು ಲೌಕಿಕ ಕಾರ್ಯಕ್ಕಾಗಿ ಹೆಜ್ಜೆಯನ್ನು ಇಡುತ್ತಿದ್ದರೂ, ಬುದ್ಧಿಯಿಂದ ಅಲೌಕಿಕ, ವಿಶ್ವಕಲ್ಯಾಣ ಕಾರ್ಯಕ್ಕಾಗಿ ಹೋಗುತ್ತಿದ್ದೇನೆ ಎಂದು ಭಾವಿಸುತ್ತಿದ್ದೇನೆ.

6. ನಾನು ಶರೀರಕ್ಕೆ ಭೋಜನವನ್ನು ಕೊಡುವಾಗ ಆತ್ಮಕ್ಕೆ ಸ್ಮೃತಿ ಎಂಬ ಭೋಜನ ಕೊಡುತ್ತಿದ್ದೇನೆ.

7. ನಾನು ಶರೀರದಿಂದ ಅತೀತ (ನಿರ್ಲಿಪ್ತ)ವಾಗಿ, ಆತ್ಮ ರೂಪದಲ್ಲಿ ಕಾರ್ಯವನ್ನು ಮಾಡಿ ಪ್ರಪಂಚಕ್ಕೆ ಪ್ರಿಯವಾಗಿದ್ದೇನೆ.

8. ನಾನು ನನ್ನ ವೃತ್ತಿ, ದೃಷ್ಟಿ, ಸ್ಮೃತಿ, ಸಂಪತ್ತು & ಸಮಯವನ್ನು ಪರಿವರ್ತಿಸಿರುವ ಸಂಪೂರ್ಣ ಸ್ವರೂಪ.

9. ನಾನು ಮನಸಾ- ಸರ್ವ ಸಂಬಂಧಗಳ ತ್ಯಾಗ ಮಾಡಿ ಒಬ್ಬ ತಂದೆಯನ್ನೇ ಸ್ಮೃತಿ ಮಾಡುವುದು,

ವಾಚಾ - ಜ್ಞಾನ ರತ್ನಗಳನ್ನೇ ನುಡಿಯುವುದು,

ಕರ್ಮಣಾ- ನಾನು ಏನು ಮಾಡಿದರೆ ಎಲ್ಲರೂ ಅದನ್ನೇ ಮಾಡುವರು ಮತ್ತು ಏನು ಮಾಡುವೆನೋ ಅದನ್ನೇ ಪಡೆಯುವೆನು, ಎಂಬ ಸ್ಮೃತಿಯಲ್ಲಿ ಕರ್ಮವನ್ನು ಆಚರಿಸುವ ಸಂಪೂರ್ಣ ಸಮರ್ಪಣಾ ಸ್ವರೂಪ.

10. ನಾನು ಸಹಜವಾಗಿ ಸಹಯೋಗವನ್ನು ಪಡೆಯುವ ಸ್ನೇಹ ಸ್ವರೂಪ.

11. ನಾನು ಗತಿಸಿ ಹೋದದ್ದಕ್ಕೆ ಬಿಂದುವಿಟ್ಟು, ಅದರಿಂದ ಪಾಠ ಕಲಿತಿರುವ ಪರಿವರ್ತನಾ ಸ್ವರೂಪ.

12. ನಾನು ಬಾಪ್ ದಾದಾರವರಿಗೆ, ಪರಿವಾರಕ್ಕೆ, ಸ್ವಯಂಗೆ ಸ್ನೇಹಿ ಮತ್ತು ಸಹಯೋಗಿ.

13. ನಾನು ತನು, ಮನ, ಧನ ಮತ್ತು ಸಮಯವನ್ನು ತಂದೆಯ ಶ್ರೀಮತಾನುಸಾರ ಉಪಯೋಗಿಸುತ್ತಿದ್ದೇನೆ.

14. ನಾನು  ಸಂಕಲ್ಪಗಳ ತೀವ್ರತೆಯನ್ನು ಕಡಿಮೆ ಮಾಡಿ (ಸಂಕ್ಷಿಪ್ತಗೊಳಿಸಿ) ಬುದ್ಧಿ ಲೈನ್ ಅನ್ನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೇನೆ.

15. ನಾನು ಜ್ಞಾನದ ವಿಷಯಗಳನ್ನು ಸರಿಯಾದ ರೂಪದಲ್ಲಿ ಧಾರಣೆ ಮಾಡಿ ಸಮಸ್ಯೆಗಳೆಲ್ಲವನ್ನು ಸಮಾಪ್ತಿ ಮಾಡಿದ್ದೇನೆ.

16. ನಾನು • ಸಮಾವೇಶಗೊಳಿಸುವ ಶಕ್ತಿ

• ಅಳವಡಿಸಿಕೊಳ್ಳುವ ಶಕ್ತಿ

• ಸಹನೆ ಶಕ್ತಿ

• ಎದುರಿಸುವ ಶಕ್ತಿಯನ್ನು (ಮಾಯೆಯನ್ನು ಎದುರಿಸಬೇಕು) ಧಾರಣೆ ಮಾಡಿ ಸಂಪೂರ್ಣ ಸಮರ್ಪಣೆಯನ್ನು ಅವಿನಾಶಿಯಾಗಿ ಮಾಡಿಕೊಂಡಿದ್ದೇನೆ.

17. ನಾನು ಯಾವುದೇ ವಿಷಯವನ್ನು ಸಂಕ್ಷಿಪ್ತವಾಗಿ ಎರಡು ಶಬ್ದಗಳಲ್ಲಿ ಮುಗಿಸಿ ಸಾರಯುಕ್ತವಾಗಿ ತಯಾರಾಗಿದ್ದೇನೆ.

18. ನನ್ನ ಪ್ರತಿಯೊಂದು ಮಾತು ಮತ್ತು ಕರ್ತವ್ಯದಿಂದ ಬಾಪ್ ದಾದಾರವರು ಪ್ರತ್ಯಕ್ಷವಾಗಿದ್ದಾರೆ.

19. ನಾನು ನನ್ನ ಮನಸಾ, ವಾಚಾ,ಕರ್ಮಣಾ ಸೇವೆಯಿಂದ ಆತ್ಮಿಕ ಸಹೋದರರೆಲ್ಲರಲ್ಲಿ ತಂದೆಯ ಸ್ನೇಹ ಮತ್ತು ಸಂಬಂಧವನ್ನು ಪ್ರತ್ಯಕ್ಷ ಮಾಡಿರುವ ವಿಹಂಗ ಮಾರ್ಗದ ಸೇವಾಧಾರಿ.

20. ನನ್ನಿಂದ ಸೇವೆಯ ರೂಪ ಪ್ರತ್ಯಕ್ಷವಾಗಿ ಬಾಪ್ ದಾದಾರವರ ಪ್ರತ್ಯಕ್ಷತೆಯಾಗಿದೆ